155ಡಿ೪ 96
ನಿ=72

**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಎಂ.ಆರ್.ಸೀತಾರಾಂ (ನಾಮ ನಿರ್ದೇಶಿತ) ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:**

ಮುಂದಿನ ವರ್ಷದಿಂದ , ಅಂದರೆ 2026-27ನೇ ಸಾಲಿನಿಂದ ಪ್ರತಿ ವರ್ಷ ಬಜೆಟ್ ಅಧಿವೇಶನವನ್ನು ಜಂಟಿ ಅಧಿವೇಶನ ಕರೆದು ಉಭಯ ಸದನದ ಸದಸ್ಯರುಗಳು ಹಾಜರಾಗುವಂತೆ ಅನುಕೂಲ ಮಾಡಿಕೊಡಲು ಸಹಕಾರಿಯಾಗುವಂತೆ, ಜಂಟಿ ಅಧಿವೇಶನದಲ್ಲಿಯೇ ಬಜೆಟ್ ಅನ್ನು ಮಂಡಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ:**

ಕರ್ನಾಟಕ ರಾಜ್ಯ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ 2005 ರಲ್ಲಿ ವಿಧಾನ ಮಂಡಲದ ಉಪವೇಶನಗಳನ್ನು ನಡೆಸುವ ಕುರಿತು ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ. ಅದರಂತೆ ಜನವರಿ ತಿಂಗಳಿನಲ್ಲಿ ಕರೆಯಲಾದ ಜಂಟಿ ಅಧಿವೇಶನದಲ್ಲಿ ರಾಜ್ಯದಲ್ಲಿ ಹಿಂದಿನ ವರ್ಷ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳನ್ನು ರಾಜ್ಯಪಾಲರು ಮಂಡಿಸುತ್ತಾರೆ.

ಭಾರತ ಸಂವಿಧಾನದ ಅನುಚ್ಛೇದ 176 ರ ಪ್ರಕಾರ ರಾಜ್ಯಪಾಲರು ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಹಾಗೂ ಪ್ರತಿ ವರ್ಷದ ಆರಂಭದಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುತ್ತಾರೆ.

ಭಾರತ ಸಂವಿಧಾನದ ಅನುಚ್ಛೇದ 198 ಹಾಗೂ 202 ರಲ್ಲಿನ ಉಪಬಂಧಗಳನ್ವಯ ಪ್ರತಿ ವರ್ಷ ರಾಜ್ಯಪಾಲರ ಪೂರ್ವಾನುಮತಿ ಪಡೆದು ವಾರ್ಷಿಕ ಆಯವ್ಯಯ ಅಧಿವೇಶನದಲ್ಲಿ ಆಯವ್ಯಯವನ್ನು ಮಂಡಿಸಲಾಗುವುದು. ತದನಂತರದಲ್ಲಿ ಭಾರತದ ಸಂವಿಧಾನದ ಪರಿಚ್ಛೇದಗಳನ್ವಯ ಬಜೆಟ್ ಹಾಗೂ ಸಂಬಂಧಿಸಿದ ಧನ ವಿನಿಯೋಗ ವಿಧೇಯಕವನ್ನು ಕಡ್ಡಾಯವಾಗಿ ವಿಧಾನ ಸಭೆಯ ಅಂಗೀಕಾರ ಪಡೆದ ನಂತರವೇ ವಿಧಾನ ಪರಿಷತ್ತಿನ ಅಂಗೀಕಾರವನ್ನು ಪಡೆಯಬೇಕಾಗಿರುತ್ತದೆ. ಭಾರತ ಸಂವಿಧಾನದ ಪರಿಚ್ಛೇದಗಳ ಅಡಿಯಲ್ಲಿ ರಾಜ್ಯದಲ್ಲಿ ಇದೇ ಕ್ರಮವನ್ನು ಪಾಲಿಸಲಾಗುತ್ತಿರುವ ಹಿನ್ನಲೆಯಲ್ಲಿ ಜಂಟಿ ಅಧಿವೇಶನದಲ್ಲಿ ವಾರ್ಷಿಕ ಆಯವ್ಯಯವನ್ನು ಮಂಡಿಸುತ್ತಿಲ್ಲವೆಂಬ ಅಂಶವನ್ನು ಸದನಕ್ಕೆ ತಿಳಿಸಬಯಸುತ್ತೇನೆ.

**ಸಂಖ್ಯೆ: ಆಇ 10 ಬಿಪಿಎ 2025**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**